# ವಿಡಿಐಟಿ ಯಲ್ಲಿ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ



**ಹಳ್ಳಿಯ ಸಂದೇಶ ನ್ಯೂಸ್**

ಹಳಿಯಾಳ: ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳ ದಲ್ಲಿ ಹಿಂದೂಸ್ತಾನಿ ಗಾಯನ ಕಾರ್ಯಕ್ರಮ ವನ್ನು ಅಗಸ್ಟ್ 21ರಂದು ಆಯೋಜಿಸಲಾಗಿತ್ತು. ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪ್ರಶಸ್ತಿ ಪುರಸ್ಕೃತ ಧಾರವಾಡ ಮೂಲದ ಖ್ಯಾತ ಹಿಂದುಸ್ತಾನಿ ಗಾಯಕ ಕುಮಾರ್ ಮರಡುರ್ ತಮ್ಮ ಗಾನಸುಧೆಯನ್ನು ಹರಿಸಿದರು. ಹಿಂದುಸ್ತಾನಿ ಸಂಗೀತದ ಬೈರವಿ, ಭೀಮಫಲಾಸ್, ಯಮನ್, ಮಾಲಕಂಸ ರಾಗದ ಗಾಯನವನ್ನು ಪ್ರಸ್ತುತಪಡಿಸಿ ಸಂಗೀತಪ್ರಿಯರನ್ನು ಮನರಂಜಿಸಿದರು. ಇವರಿಗೆ ಆಕಾಶವಾಣಿ ಕಲಾವಿದ ಸತ್ಲಿಂಗಪ್ಪ ದೇಸಾಯಿ ತಬಲಾ ಹಾಗೂ ಬಸು ಹಿರೇಮಠ ಹಾರ್ಮೋನಿಯಂ ಸಾಥ್ ನೀಡಿದರು.

ಭಾರತದ ಉತ್ಕೃಷ್ಟ ಸಂಗೀತವಾದ ಹಿಂದುಸ್ತಾನಿ ಗಾಯನದ ಕುರಿತಾಗಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹೇಳಿದರು. ಮನಸ್ಸಿನ ಪ್ರಶಾಂತತೆಯನ್ನು ಕಾಪಾಡಿಕೊಳ್ಳಲು ಹಿಂದುಸ್ತಾನಿ ಸಂಗೀತ ಸಹಕಾರಿಯಾಗುವುದೆಂದು ಹೇಳಿದರು. ಡಾ. ಸ್ನೇಹಾ ಕುಲಕರ್ಣಿ, ಪ್ರೊ. ಲಕ್ಷ್ಮಿ ಹಟ್ಟಿ ಹೋಳಿ, ಸುನಿಲ್ ಯರಗಟ್ಟಿ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಮಹಾವಿದ್ಯಾಲಯದ ಸ್ಪೀಕ್ ಮೇಕೆ ಕ್ಲಬ್ ವತಿಯಿಂದ ಆಯೋಜಿಸಲಾಗಿದ್ದ ಈ ಸಂಗೀತ ಕಾರ್ಯಕ್ರಮದಲ್ಲಿ ಎಲ್ಲಾ ವಿಭಾಗದ ಡೀನ್ ಗಳು, ವಿಭಾಗ ಮುಖ್ಯಸ್ಥರು, ಬೋಧಕ ಬೋಧಕ್ಕೆ ತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


Powered By KHUSHIHOST ® | License - ePaperCloud.com

# ವಿಡಿಐಟಿಯಲ್ಲಿ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ



**»ಜನಮಾಧ್ಯಮ, ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ ಹಿಂದೂಸ್ತಾನಿ ಗಾಯನ ಕಾರ್ಯಕ್ರಮವನ್ನು ಆ.21ರಂದು ಆಯೋಜಿಸಲಾಗಿತ್ತು. ಉಸ್ತಾದ್ ಬಿಸ್ಮಿಲ್ಲಾ ಖಾನ್ 'ಯುವ ಪ್ರಶಸ್ತಿ ಪುರಸ್ಕೃತ ಧಾರವಾಡ ಮೂಲದ' ಖ್ಯಾತ ಹಿಂದುಸ್ತಾನಿ ಗಾಯಕ ಕುಮಾರ್ ಮರಡುರ್ ತಮ್ಮ ಗಾನಸುಧೆಯನ್ನು ಹರಿಸಿದರು. ಹಿಂದುಸ್ತಾನಿ ಸಂಗೀತದ ಭೈರವಿ, ಭೀಮಫಲಾಸ್, ಯಮನ್, ಮಾಲಕಂಸ ರಾಗದ ಗಾಯನವನ್ನು ಪ್ರಸ್ತುತಪಡಿಸಿ ಸಂಗೀತಪ್ರಿಯರನ್ನು ಮನರಂಜಿಸಿದರು. ಇವರಿಗೆ ಆಕಾಶವಾಣಿ ಕಲಾವಿದ ಸತ್ಲಿಂಗಪ್ಪ ದೇಸಾಯಿ ತಬಲಾ ಹಾಗೂ ಬಸು ಹಿರೇಮಠ ಹಾರ್ಮೋನಿಯಂ ಸಾಥ್ ನೀಡಿದರು. ಭಾರತದ ಉತ್ಕೃಷ್ಟ ಸಂಗೀತವಾದ ಹಿಂದುಸ್ತಾನಿ ಗಾಯನದ ಕುರಿತಾಗಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹೇಳಿದರು. ಮನಸ್ಸಿನ ಪ್ರಶಾಂತತೆಯನ್ನು ಕಾಪಾಡಿಕೊಳ್ಳಲು ಹಿಂದುಸ್ತಾನಿ ಸಂಗೀತ ಸಹಕಾರಿಯಾಗುವುದೆಂದು ಹೇಳಿದರು. ಡಾ. ಸ್ನೇಹಾ ಕುಲಕರ್ಣಿ, ಪ್ರೊ. ಲಕ್ಷ್ಮಿ ಹಟ್ಟಿ ಹೋಳಿ, ಸುನಿಲ್ ಯರಗಟ್ಟಿ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಮಹಾವಿದ್ಯಾಲಯದ ಸ್ಪೀಕ್ ಮೇಕೆ ಕ್ಲಬ್ ವತಿಯಿಂದ ಆಯೋಜಿಸಲಾಗಿದ್ದ ಈ ಸಂಗೀತ ಕಾರ್ಯಕ್ರಮದಲ್ಲಿ ಎಲ್ಲ ವಿಭಾಗದ ಡೀನ್‌ಗಳು, ವಿಭಾಗ ಮುಖ್ಯಸ್ಥರು, ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಜಾವಾಣಿ

# ‘ಸಂಗೀತ ಆಲಿಕೆಯಿಂದ ಮನಃಶಾಂತಿ’

ಪ್ರಜಾವಾಣಿ ವಾರ್ತೆ

ಹಳಿಯಾಳ: ಮನಸ್ಸಿನ ಪ್ರಶಾಂತತೆಯನ್ನು ಕಾಪಾಡಿಕೊಳ್ಳಲು ಹಿಂದೂಸ್ತಾನಿ ಸಂಗೀತ ಸಹಕಾರಿಯಾಗುತ್ತದೆ ಎಂದು ಕೆ ಎಲ್ ಎಸ್ ವಿ ಡಿ ಐ ಟಿ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಹೇಳಿದರು.

ಗುರುವಾರ ಇಲ್ಲಿನ ಕೆಎಲ್ ಎಸ್ ವಿ ಡಿಐಟಿ ಕಾಲೇಜಿನಲ್ಲಿ ಏರ್ಪಡಿಸಲಾದ ಹಿಂದೂಸ್ತಾನಿ ಗಾಯನ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದರು. ಭಾರತದ ಉತ್ಕೃಷ್ಟ ಸಂಗೀತವಾದ ಹಿಂದೂಸ್ತಾನಿ ಗಾಯನದ ಕುರಿತಾಗಿ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪ್ರಶಸ್ತಿ ಪುರಸ್ಕೃತ ಧಾರವಾಡ ಮೂಲದ ಹಿಂದುಸ್ತಾನಿ ಗಾಯಕ ಕುಮಾರ ಮರಡುರ ಹಿಂದೂಸ್ತಾನಿ ಗಾಯನ ಸಾದರ ಪಡಿಸಿದರು. ಆಕಾಶವಾಣಿ ಕಲಾವಿದ ಸತ್ಲಿಂಗಪ್ಪ ದೇಸಾಯಿ ತಬಲಾ, ಬಸು ಹಿರೇಮಠ ಹಾರ್ಮೋನಿಯಂ ಸಾಥ್ ನೀಡಿದರು. ಡಾ. ಸ್ನೇಹಾ ಕುಲಕರ್ಣಿ, ಪ್ರೊ, ಲಕ್ಷ್ಮಿ ಹಟ್ಟಿಹೋಳಿ, ಸುನಿಲ ಯರಗಟ್ಟಿ ಇದ್ದರು.



ಹಳಿಯಾಳದ ಕೆ ಎಲ್ ಎಸ್ ವಿ ಡಿ ಐ ಟಿ ಕಾಲೇಜಿನಲ್ಲಿ ಹಿಂದುಸ್ತಾನಿ ಗಾಯಕ ಕುಮಾರ ಮರಡುರ ಅವರನ್ನು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಸನ್ಮಾನಿಸಿದರು. ಕಾಲೇಜಿನ ವಿವಿಧ ಇಲಾಖೆಯ ಮುಖ್ಯಸ್ಥರು ಪಾಲ್ಗೊಂಡಿದ್ದರು.

[redacted]